# ಮಂಜು ಕರಗಿದ ಬಾನಿನಲ್ಲಿ ಹೊಸ ಬೆಳಗು

‘ನಿನಗೆ ಈಗ ನಿನ್ನ ಮಗುವಿನ ಬಗ್ಗೆ ಮೊದಲಿನ ಆತಂಕ, ಭಯ ಇರುವುದಿಲ್ಲ. ನಿನ್ನ ಹಿಡಿತ, ನಿಯಂತ್ರಣ, ಅತೀ ಕಾಳಜಿ ಮತ್ತು ಅತೀ ರಕ್ಷಕ ಸ್ವಭಾವದಿಂದ ಮಗುವಿನ ಮಾನಸಿಕ ಬೆಳವಣಿಗೆಯ ಮೇಲೆ ಅಡ್ಡ ಪರಿಣಾಮ ಬೀಳಬಹುದು. ಮಕ್ಕಳ ಬಾಲ್ಯ ಅವರ ಮನೋವಿಕಾಸದ ಮೇಲೆ, ಅವರ ವ್ಯಕ್ತಿತ್ವ ನಿರ್ಮಾಣದ ಮೇಲೆ ದೊಡ್ಡ ಪ್ರಭಾವ ಬೀರುತ್ತದೆ ಎನ್ನುವುದು ನಿನಗೆ ಗೊತ್ತಾ? ಹಾಗಾಗಿ ತಾಯಿ ತಂದೆಯರು ಮಕ್ಕಳ ಮಾನಸಿಕ ಬೆಳವಣಿಗೆಯ ಮೇಲೆ ಮಹತ್ವದ ಪಾತ್ರ ವಹಿಸುತ್ತಾರೆ. ಆ ಕಾರಣಕ್ಕೆ ನೀನು ಮಗುವನ್ನು ಸ್ವತಂತ್ರವಾಗಿ ಬೆಳೆಯಲು ಬಿಡಬೇಕು. ಅದಕ್ಕೆ ತಿಳಿವಳಿಕೆ ಬರತೊಡಗಿದಾಗ ಅವಳಿಗೆ, ಶಾಲೆಯಲ್ಲೂ ಜೊತೆಗೆ ನೀವೂ ಕೂಡ, ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ವಿವರಿಸಿ. ಮಗು ಏನೇ ಕಷ್ಟ ಬಂದರೂ ನಿನ್ನ ಬಳಿ ಯಾವ ಮುಜುಗರವಿಲ್ಲದೆ ಬಂದು ಸ್ನೇಹದಿಂದ ಹೇಳಿಕೊಳ್ಳುವಂಥ ಆರೋಗ್ಯಕರ ವಾತಾವರಣ ಕಲ್ಪಿಸು. ನಿನ್ನ ಅತಿರಕ್ಷಣೆಯ ವರ್ತನೆ ಅವಳಿಗೆ ಉಸಿರುಗಟ್ಟುವಂತೆ ಆಗಬಾರದು. ನನ್ನ ಮಾತುಗಳೆಲ್ಲವೂ ಅರ್ಥವಾಯಿತಲ್ಲವೇ?’

‘ಹೌದು ಮೇಡಮ್. ಅರ್ಥವಾಯಿತು’ ಎಂದ ನಿವಿಯ ಧ್ವನಿಯಲ್ಲಿ ಒಂದಷ್ಟು ಆತ್ಮವಿಶ್ವಾಸದ ಸೆಳಕು ಮೂಡಿತ್ತು.

‘ನಿನ್ನ ಜೊತೆ ನಿನ್ನ ಎಲ್ಲಾ ಕಷ್ಟ ಸುಖಗಳಲ್ಲಿ ಹೆಗಲು ಕೊಡುವ ಪತಿ ನಿನಗೆ ದೊರಕಿದ್ದಾರೆ. ಪ್ರದೀಪ್‌ಗೆ ಇದೆಲ್ಲಾ ಸಂಗತಿ ಗೊತ್ತಾಗಿದೆ. ನೀನಿನ್ನು ಯಾವ ಕಾರಣಕ್ಕೂ ಅಳುಕಬೇಕಾಗಿಲ್ಲ. ಆ ಘಟನೆಯಲ್ಲಿ ನೀನು ಬಲಿಪಶುವಾದರೂ ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ಹಾಗಾಗಿ ನಿನ್ನ ಮನಸ್ಸಿನಲ್ಲಿರುವ ಅಪರಾಧಿ ಭಾವವನ್ನು ಅಳಿಸಿಹಾಕು. ಎಲ್ಲರೊಂದಿಗೆ ಮುಕ್ತವಾಗಿ ಬೆರೆಯಬೇಕು’.

‘ಹ್ಞೂಂ’.

‘ಸರಿ. ಈಗ ನೀನು ಮತ್ತೆ ವಾಸ್ತವಕ್ಕೆ ಬರುತ್ತಿದ್ದೀಯಾ. ಒಂದು, ಎರಡು, ಮೂರು. ಈಗ ನಿಧಾನವಾಗಿ ನೀನು ಕಣ್ಣು ತೆರೆಯಬಹುದು. ಈಗ ಎಲ್ಲವೂ ಸಹಜ ಸ್ಥಿತಿಗೆ ಬಂದಿದೆ. ಕಣ್ಣು

